

ಮುಂದಕ್ಕೆ ಹೋಗಿಲ್ಲ. ನಿಮ್ಮೊಂದಿಗಿನ ಈ ಸಣ್ಣ ಮಾತುಕತೆ ನನ್ನ ಇಡೀ ದಿನದ ನೋವನ್ನು, ದಣಿವನ್ನು ದೂರಮಾಡುತ್ತದೆ. ಏಕೆಂದರೆ, ನನ್ನ ಮುಂದೆ ಹಾದುಹೋಗುವ ಇತರರಿಗೆ ನಾನು ಏನೂ ಅಲ್ಲವೇ ಅಲ್ಲ.

ಪ್ರತಿದಿನದಂತೆ ಈ ದಿನವೂ ನೀವು ಕಾರ್ಖಾನೆಯ ಒಳಗೆ ಬಂದಿದ್ದನ್ನು ನೋಡಿದ್ದೆ. ಆದರೆ, ಕಾರ್ಖಾನೆ ಬಿಟ್ಟಾಗ ಎಲ್ಲರೂ ಹೋದರೂ ನೀವು ಹೊರಗೆ ಬರಲಿಲ್ಲ. ಹಾಗಾಗಿ ನಿಮ್ಮನ್ನು ಹುಡುಕುತ್ತ ನಾನು ಗೇಟಿನಿಂದ ಒಳಗೆ ಬಂದೆ. ಕಾರ್ಖಾನೆಯ ಎಲ್ಲ ಭಾಗಗಳನ್ನೂ ಹುಡುಕಿದೆ. ಕೊನೆಗೆ ನೀವು ಫ್ರೀಜರ್ ಕೋಣೆಯಲ್ಲಿ ಇರುವುದು ಕಂಡುಬಂತು. ನಿಮ್ಮನ್ನು ಹೊತ್ತುಕೊಂಡು ಈ ಹೀಟರ್ ಬಳಿಗೆ ತಂದೆ...'

ಆ ಸಮಯದಲ್ಲಿ ಈ ವ್ಯಕ್ತಿಯ ಬಾಯಿಯಿಂದ ಕೆಲಕಾಲ ಮಾತೇ ಹೊರಬೀಳಲಿಲ್ಲ. ಪ್ರತಿದಿನದ ಒಂದು 'ನಮಸ್ಕಾರ' ತನ್ನನ್ನು ಈ ದಿನ ಸಾವಿನ ದವಡೆಯಿಂದ ಪಾರುಮಾಡಿದೆ ಎನ್ನುವುದನ್ನು ಊಹಿಸಲೂ ಆತನಿಂದ ಸಾಧ್ಯವಿರಲಿಲ್ಲ. ಆ ಕಾವಲುಗಾರನಿಗೆ ಧನ್ಯವಾದ ತಿಳಿಸುತ್ತ ಮತ್ತೊಮ್ಮೆ ಆ ವ್ಯಕ್ತಿ ಯೋಚಿಸಿದ, 'ಯಾವಾಗಲೂ ಇತರರೊಂದಿಗೆ ಪ್ರೀತಿಯಿಂದ ವರ್ತಿಸಿದರೆ ಈ ಜಗತ್ತೇ ಸುಂದರವಾಗುತ್ತದೆ. ನಮ್ಮ ಒಂದು ಸಣ್ಣ ಮುಗುಳ್ನಗೆ ಇತರರಿಗೆ ಸಂತೋಷ ನೀಡಬಲ್ಲದು. ಅಷ್ಟಕ್ಕೂ ನಾವು ಇದರಿಂದ ಕಳೆದುಕೊಳ್ಳುವುದು ಏನೂ ಇಲ್ಲ.'